**ಗೋಲ್ವಾಲ್ಕರ್ ಬಂದಿದ್ದರು. ಆ ತಾತ್ವಿಕತೆಯಿಂದ ನೀವು ಎಡಪಂಥೀಯ ಮತ್ತು ಸಮಾಜವಾದಿ ತಾತ್ವಿಕತೆಯ ಕಡೆಗೆ ನಡೆದಿರಿ. ನಿಮ್ಮ ವ್ಯಕ್ತಿತ್ವವನ್ನೇ ಇಡಿಯಾಗಿ ಬದಲಿಸಿದ ಸಂಗತಿ ಇದು...**

ನಿಜ. ನನಗೆ ಆರ್.ಎಸ್.ಎಸ್. ಸಂಘಟನೆಯ ಬಗ್ಗೆ ಆರಂಭದಲ್ಲಿ ಒಲವಿತ್ತು. ಅದು ಮತ್ತೇನಕ್ಕಲ್ಲ, ಬದುಕಿಗೆ ಬೇಕಾದ ಶಿಸ್ತನ್ನು ಅದು ಕಲಿಸುತ್ತದೆ ಎಂದು ನಮ್ಮನ್ನು ನಂಬಿಸಲಾಗಿತ್ತು. ಅದು ನನ್ನ ತವರಿನ ವಾತಾವರಣ. ಆದ್ದರಿಂದಲೇ ನಾನು ನನ್ನ ಮಕ್ಕಳನ್ನೂ ಬಲವಂತವಾಗಿ ಅದರ ಕಾರ್ಯಕ್ರಮಗಳಿಗೆ ಕಳಿಸ್ತಾ ಇದ್ದೆ. ಮೊದಲ ಮಗ ಗುರು ಪರವಾಗಿಲ್ಲ, ಮೆದು ಸ್ವಭಾವದವನು. ಎರಡನೆಯ ಮಗ ಸುರೇಶನಂತೂ ಇದನ್ನು ಬಲವಾಗಿ ವಿರೋಧಿಸುತ್ತಿದ್ದ.

ಒಟ್ಟೂ ಭಾರತವೇ ಆ ದಿನಗಳಲ್ಲಿ ಎಡಪಂಥೀಯ ವಿಚಾರಧಾರೆಯಿಂದ ಸಕಾರಣವಾಗಿ ಆಕರ್ಷಿತವಾಗಿತ್ತು. ಸಾಹಿತ್ಯ, ಕಲೆ ಮತ್ತು ಒಟ್ಟಾರೆಯಾಗಿ ಸಾಂಸ್ಕೃತಿಕ ಕ್ಷೇತ್ರವೇ ಬಹಳ ಲಿಬರಲ್ ಮತ್ತು ಸೆಕ್ಯುಲರ್ ಆಗೋದಿಕ್ಕೆ ತೀವ್ರವಾಗಿ ಹಂಬಲಿಸಿದ ಕಾಲಘಟ್ಟ ಅದು. ಸಾಮಾಜಿಕ ನ್ಯಾಯ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಆಶಯಗಳು ಎಲ್ಲರನ್ನೂ ಆವರಿಸಿದ್ದವು. ನಾನು ಆ ಘಟ್ಟದ ಎಲ್ಲ ಪ್ರತಿರೋಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದೆ.

◆ **ನಿಮ್ಮ ಬೀದಿ ನಾಟಕಗಳ ಆರಂಭವನ್ನೂ ಇದಕ್ಕೆ ಸಂವಾದಿಯಾಗಿ ನೋಡಬಹುದು.**

ನೋಡಬಹುದು. ನನ್ನ ಮೊದಲ ಬೀದಿ ನಾಟಕ ರಚನೆಯಾದದ್ದೇ ಸತ್ಯಘಟನೆಯನ್ನು ಆಧರಿಸಿ. ಮಾಜಿ ಮುಖ್ಯಮಂತ್ರಿಗಳು ನರಹರಿರಾಯರ ಗುಡ್ಡದಲ್ಲಿ ದೇವಸ್ಥಾನ ಕಟ್ಟಿಸೋಕೆ ಚಂದಾ ಎತ್ತೋಕೆ ಅಂತ ಬಂದಿದ್ದರು. ಪತ್ರಕರ್ತರಾದ ಸಿ.ವಿ. ರಾಜಗೋಪಾಲ್, ಇತರ ಶ್ರೀಮಂತರು, ಪ್ರಭಾವಿಗಳನ್ನೆಲ್ಲ ಅವರು ಮಾತನಾಡಿಸಿದರು. ಅವತ್ತು ಅವರಿಗೆ ಒಂದು ಮನವಿ ಕೊಡೋಕೆ ಅಂತ ಅ.ನಾ. ಸುಬ್ಬರಾಯರು ಕಾದೇ ಕಾದರು. ಅವರು ಕೈಯಲ್ಲಿ ಹಿಡಿದಿದ್ದ ಹೂವಿನ ಹಾರದ ಹೂವುಗಳೆಲ್ಲ ಉದುರಿ ಹೋಗಿ ಬರೇ ದಾರ ಉಳಿದಿತ್ತು. ಬಹಳ ಸಂಕಟವಾಯಿತು ನನಗೆ. ಇದೇನು ಅಧಿಕಾರ ಉಳ್ಳವರ ನಡವಳಿಕೆ ಅಂತ. ಆವತ್ತಿಗೆ ಆ ಪ್ರದೇಶವನ್ನ ಸುಂಕೇನಹಳ್ಳಿ ಅಂತ ಕರೀತಾ ಇದ್ದರು. ನಿಜ ಅಂದರೆ, ಸುಂಕೇನಹಳ್ಳಿಯ ಸೋರುತ್ತಿರುವ ಶಾಲೆಗೆ ಸೂರು ಮುಖ್ಯವಾಗಿತ್ತೇ ಹೊರತು ದೇವಸ್ಥಾನವಲ್ಲ. ಇದನ್ನೇ ವಸ್ತು ಮಾಡಿಕೊಂಡು 'ಬಂದರೋ ಬಂದರು' ಅನ್ನೋ ಬೀದಿ ನಾಟಕ ಬರೆದೆ.

◆ **ಕನ್ನಡದ ಮೊದಲ ಬೀದಿ ನಾಟಕ ನಿಮ್ಮದೇ. ಯಾಕೆ ಅಂದರೆ, ಅದಕ್ಕೆ ಸ್ವಲ್ಪ ಮುಂಚೆ ಎ.ಎಸ್. ಮೂರ್ತಿ ಅವರು ಒಂದು ನಾಟಕ ಬರೆದಿದ್ದರು. ಅದನ್ನ ವೈ.ಎಸ್.ವಿ. ದತ್ತ ಮೊದಲಾದವರ ನೇತೃತ್ವದಲ್ಲಿ ರಾಜಾಜಿನಗರದ ರಾಮಮಂದಿರದಲ್ಲಿ ಪ್ರಯೋಗವನ್ನೂ ಮಾಡಿದರು. ಆದರೆ, ಅದನ್ನು ವೇದಿಕೆಯಲ್ಲಿ ಪ್ರಯೋಗಿಸಿದ್ದರಿಂದ ಅದನ್ನ ಬೀದಿ ನಾಟಕ ಅಂತ ಕರೆಯೋದಿಕ್ಕೆ ಸಾಧ್ಯವಾಗೋದಿಲ್ಲ. ಹೀಗಾಗಿ, ಅಧಿಕೃತವಾಗಿ ನಿಮ್ಮದೇ ಮೊದಲ ಬೀದಿ ನಾಟಕ. ಬೀದಿ ನಾಟಕಗಳ ಯಶಸ್ಸು ಬಹಳ ದೊಡ್ಡದು. ಅವು ಕನ್ನಡ ರಂಗಭೂಮಿಯಲ್ಲಿ ಮತ್ತು ಸಾಂಸ್ಕೃತಿಕ ವಲಯದಲ್ಲಿ ಹೊಸ ಸಂಚಲನವನ್ನೇ ಮೂಡಿಸಿದವು. ಏನೆಲ್ಲ ವಸ್ತುಗಳ ಮೇಲೆ ಬೀದಿ ನಾಟಕಗಳನ್ನ ಬರೆದಿದ್ದಿರಿ?**

ಸಮಕಾಲೀನವಾದ ಅನೇಕ ಸಮಸ್ಯೆಗಳನ್ನು ಕುರಿತು ನಾಟಕ ಬರೆದೆ. ನಾನು ಬರೆದ ಬೀದಿ ನಾಟಕದ ನೂರನೇ ಪ್ರಯೋಗ ಆದಾಗ ವೈ.ಎಸ್.ವಿ. ದತ್ತ, ನಾಗರಾಜ ಮೂರ್ತಿ ಮೊದಲಾದವರು ನನಗೆ ಒಂದು ಸನ್ಮಾನವನ್ನೂ ಮಾಡಿದರು. ಆ ಕಾರ್ಯಕ್ರಮಕ್ಕೆ ಗೋಕಾಕರು ಅತಿಥಿಯಾಗಿ ಬಂದಿದ್ದರು. ಬೀದಿ ನಾಟಕಗಳ ವಿಷಯದಲ್ಲಿ ಎ.ಎಸ್. ಮೂರ್ತಿಯವರ ಸಾಧನೆಯೂ ಬಲು ದೊಡ್ಡದು. ಇಲ್ಲೇ ಇನ್ನೊಂದು ಅಂಶವನ್ನು ಹೇಳಿಬಿಡಬಹುದು. ಬೀದಿ ನಾಟಕಗಳ ಅಸಾಧಾರಣವಾದ ಯಶಸ್ಸು ಕೂಡ ಆ ಕಾಲದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬರೋದಿಕ್ಕೆ ಒಂದು ಮುಖ್ಯವಾದ ಕಾರಣವಾಯಿತು. ರಾಮಕೃಷ್ಣ ಹೆಗಡೆ, ಎಂ.ಪಿ. ಪ್ರಕಾಶ್, ಜೀವರಾಜ್ ಆಳ್ವ ಮೊದಲಾದವರಿಗೆಲ್ಲ ನಮ್ಮ ಬಗ್ಗೆ ತುಂಬಾ ಗೌರವ ಇದ್ದದ್ದು ಈ ಕಾರಣಕ್ಕಾಗಿಯೇ.